# ದೀಪಾವಳಿಗೆ 5ಜಿ ಪಟಾಕಿ

■ **ಶಶಿಕುಮಾರ್ ಸಿ.**




ಕಳೆದ ಒಂದೆರಡು ವರ್ಷಗಳಿಂದ ಸದ್ದು ಮಾಡುತ್ತಲೇ ಇರುವ 5ಜಿ ನೆಟ್‌ವರ್ಕ್ ಸೇವೆಯ ಚಾಲ್ತಿಗೆ ಈಗ ಕಾಲ ಪಕ್ವವಾದಂತಿದೆ. ಮುಂದಿನ ಒಂದು ತಿಂಗಳ ಅವಧಿಯಲ್ಲಿ, ಅಂದರೆ ದೀಪಾವಳಿ ಹಬ್ಬದ ಆಸುಪಾಸಿನಲ್ಲಿ 5ಜಿ ನೆಟ್‌ವರ್ಕ್ ದೇಶದ ಮೆಟ್ರೊ ನಗರಗಳಲ್ಲಿ ತನ್ನ ಸೇವೆಯನ್ನು ಆರಂಭಿಸುವ ನಿರೀಕ್ಷೆಯಿದೆ. ದೇಶದ ತಂತ್ರಜ್ಞಾನ ಕ್ಷೇತ್ರದಲ್ಲಿ ಒಂದೆರಡು ವರ್ಷಗಳಿಂದ ಮೂಡಿದ್ದ ನಿರೀಕ್ಷೆಯು ಈಗ ಗರಿಗೆದರಿದೆ.

ಏರ್‌ಟೆಲ್ ಕಂಪನಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಗೋಪಾಲ್ ವಿಠಲ್, ಕಂಪನಿಯ ಕೋಟ್ಯಂತರ ಗ್ರಾಹಕರಿಗೆ ಈ ಬಗ್ಗೆ ಪತ್ರ ಬರೆದಿದ್ದಾರೆ! ದೀಪಾವಳಿ ಸಮಯಕ್ಕೆ ಗ್ರಾಹಕರನ್ನು ತಲುಪಲಿರುವ ಏರ್‌ಟೆಲ್ 5ಜಿಯು, 4ಜಿ ನೆಟ್‌ವರ್ಕ್‌ಗಿಂತ 20–30 ಪಟ್ಟು ಹೆಚ್ಚು ವೇಗವಾಗಿ ಕಾರ್ಯನಿರ್ವಹಿಸಲಿದೆ. 5ಜಿ ನೆಟ್‌ವರ್ಕ್ ಬಗ್ಗೆ ತನ್ನ ಗ್ರಾಹಕರಲ್ಲಿ ಮೂಡಬಹುದಾದ ಅಥವಾ ಮೂಡಿರುವ ಹಲವು ಪ್ರಶ್ನೆಗಳಿಗೆ ಉತ್ತರವನ್ನೂ ವಿಠಲ್ ಅವರು ತಮ್ಮ ಪತ್ರದಲ್ಲಿ ಉಲ್ಲೇಖಿಸಿದ್ದಾರೆ!

‘5ಜಿ ಸೇವೆಯನ್ನು ದೆಹಲಿ, ಮುಂಬೈ, ಕೋಲ್ಕತ್ತ, ಬೆಂಗಳೂರು ಮತ್ತು ಚೆನ್ನೈ ನಗರಗಳಲ್ಲಿ ಮಾತ್ರ ಮೊದಲ ಹಂತವಾಗಿ ಏರ್‌ಟೆಲ್ ಕಲ್ಪಿಸಲಿದೆ. ಮುಂದಿನ ದಿನಗಳಲ್ಲಿ, ಅಂದರೆ 2023ರ ಅಂತ್ಯದ ವೇಳೆಗೆ ದೇಶದೆಲ್ಲೆಡೆ ಏರ್‌ಟೆಲ್ 5ಜಿ ಸೇವೆ ಒದಗಿಸುವ ಯೋಜನೆಯನ್ನು ಕಂಪನಿ ಹೊಂದಿದೆ. ಸೆಪ್ಟೆಂಬರ್ 29ರಂದು ನಡೆಯಲಿರುವ ಇಂಡಿಯನ್ ಮೊಬೈಲ್ ಕಾಂಗ್ರೆಸ್ (ಐಎಂಸಿ) ಕಾರ್ಯಕ್ರಮದಲ್ಲಿ ಪ್ರಧಾನ ಮಂತ್ರಿ ದೇಶದೆಲ್ಲೆಡೆ 5ಜಿ ನೆಟ್‌ವರ್ಕ್‌ಗೆ ಚಾಲನೆ ನೀಡಲಿದ್ದಾರೆ ಎನ್ನುವ ಮಾತೂ ಚಾಲ್ತಿಯಲ್ಲಿದೆ.

### ಏರ್‌ಟೆಲ್ 5ಜಿ ಸೇವೆ ಸುಲಭ!

ವರ್ಷದ ಹಿಂದಿನಿಂದ ದೇಶದಲ್ಲಿ ಬಳಕೆಯಲ್ಲಿರುವ ಬಹುತೇಕ ಸ್ಮಾರ್ಟ್‌ಫೋನ್‌ಗಳು 5ಜಿ ಚಿಪ್‌ಸೆಟ್ ಅನ್ನು ಹೊಂದಿರುವುದಿಲ್ಲ. ಹೀಗಾಗಿ ಅವುಗಳು ಏರ್‌ಟೆಲ್ ಸೇರಿದಂತೆ ದೇಶದ ಯಾವುದೇ ಇತರ 5ಜಿ ನೆಟ್‌ವರ್ಕ್ ಸೇವೆಗೆ ಸಪೋರ್ಟ್ ಮಾಡುವುದಿಲ್ಲ. ಹೀಗಾಗಿ, ಬದಲಿ 5ಜಿ ಸ್ಮಾರ್ಟ್‌ಫೋನ್‌ಗಳತ್ತ ಜನ ಮುಖ ಮಾಡಲೇಬೇಕಿದೆ. ವರ್ಷದಿಂದೀಚೆಗೆ ಮಾರುಕಟ್ಟೆಗೆ ಬಂದ ಸ್ಮಾರ್ಟ್‌ಫೋನ್‌ಗಳು 5ಜಿಗೆ ಸ್ಪಂದಿಸಲಿವೆ.

ಹೀಗಾಗಿ, ಇನ್ನು ಮುಂದೆ ಹೊಸ ಫೋನ್‌ಗಳ ಖರೀದಿ ವೇಳೆ ಅವು 5ಜಿ ಸೌಲಭ್ಯ ಹೊಂದಿವೆಯೇ ಎಂಬುದನ್ನು ಖಾತರಿಪಡಿಸಿಕೊಳ್ಳಬೇಕು. ಆ ಬಳಿಕವಷ್ಟೇ 5ಜಿಗೆ ಸಂಪರ್ಕ ಪಡೆದುಕೊಳ್ಳಬಹುದು. 5ಜಿ ಸ್ಮಾರ್ಟ್‌ಫೋನ್‌ನ ಸೆಟ್ಟಿಂಗ್ಸ್ ಕ್ಲಿಕ್ಕಿಸಿ ಮೊಬೈಲ್ ನೆಟ್‌ವರ್ಕ್ ಆಯ್ಕೆಗೆ ಹೋಗಬೇಕು. ಅಲ್ಲಿ 5ಜಿ ಮತ್ತು 4ಜಿ ಅಥವಾ ಎಲ್‌ಟಿಇ ಆಯ್ಕೆಗಳು ಕಾಣುತ್ತವೆ. ಅದರಲ್ಲಿ 5ಜಿ ಆಯ್ಕೆಯನ್ನು ಕ್ಲಿಕ್ಕಿಸಿದರೆ ನಿಮ್ಮ ಮೊಬೈಲ್‌ನಲ್ಲಿ ಆ ಸೇವೆಯನ್ನು ಪಡೆಯಬಹುದು.

### ಗ್ರಾಹಕರಿಗೆ ವಿಠಲ್ ಸಲಹೆ

- 5ಜಿ ಬೆಂಬಲಿಸುವ ಸ್ಮಾರ್ಟ್‌ಫೋನ್‌ಗಳಿಗೆ ಅಪ್‌ಗ್ರೇಡ್ ಆಗಿ.
- ಏರ್‌ಟೆಲ್‌ನ ಈ ಸೇವೆಯು ನಿಮ್ಮ ವ್ಯಾಪ್ತಿಯಲ್ಲಿ ಲಭ್ಯವಿರಲಿದೆಯೇ ಎಂದು ಮುಂಚಿತವಾಗಿ ಖಾತರಿಪಡಿಸಿಕೊಂಡು ಪ್ಲಾನ್ ಮಾಡಿಕೊಳ್ಳಿ. ಇದಕ್ಕಾಗಿ ಏರ್‌ಟೆಲ್ ‘ಥ್ಯಾಂಕ್ಸ್ ಆ್ಯಪ್’ ಪರಿಶೀಲಿಸಿ.
- ನಿಮ್ಮ ಫೋನ್ 5ಜಿ ಸೇವೆಗೆ ಪೂರಕವಾಗಿ ಸ್ಪಂದಿಸಲಿದೆಯೇ ಎಂಬುದನ್ನು ಮುಂಚಿತವಾಗಿಯೇ ಖಾತರಿಪಡಿಸಿಕೊಳ್ಳಿ. ಒಂದು ವೇಳೆ ಸ್ಪಂದಿಸದಿದ್ದರೆ 5ಜಿ ಫೋನ್ ಅನ್ನು ಖರೀದಿಸಿ.
- ಏರ್‌ಟೆಲ್ ಸಿಮ್ ಅನ್ನು ಈಗಾಗಲೇ 5ಜಿಗೆ ಆಕ್ಟೀವ್ ಮಾಡಲಾಗಿದೆ.

### ಹೊಸ ನೆಟ್‌ವರ್ಕ್‌ನ ವಿಶೇಷತೆ

- ಮೊಬೈಲ್ ಬೂಟ್, ಅಪ್ಲಿಕೇಷನ್ ಡೌನ್‌ಲೋಡ್ ಮತ್ತು ದೊಡ್ಡ ಗಾತ್ರದ ಫೈಲ್ ಅನ್ನು ಕ್ಷಣಾರ್ಧದಲ್ಲಿ ಡೌನ್‌ಲೋಡ್ ಮಾಡುತ್ತದೆ.
- ನೆಟ್‌ವರ್ಕ್ ಕಾರ್ಯನಿರ್ವಹಣೆಯಲ್ಲಿ ಗಮನಾರ್ಹವಾದ ಬದಲಾವಣೆ ತರಲಿದ್ದು, ಗ್ರಾಹಕರಿಗೆ ವಿಶಿಷ್ಟ ಅನುಭವ ನೀಡಲಿದೆ.
- ಪರಿಸರ ಸ್ನೇಹಿ 5ಜಿ ತಂತ್ರಜ್ಞಾನ ವಿಧಾನವನ್ನು ಏರ್‌ಟೆಲ್ ಅಳವಡಿಸಿಕೊಂಡಿದೆ.
- ಪ್ರಾಯೋಗಿಕ ಪರೀಕ್ಷೆಯ ವರದಿಯಂತೆ ಇತರ ನೆಟ್‌ವರ್ಕ್ ಸಂಪರ್ಕ ಹೊಂದಿದ 10ರಲ್ಲಿ 4 ಸ್ಮಾರ್ಟ್‌ಫೋನ್‌ಗಳು 5ಜಿಗೆ ಸಪೋರ್ಟ್ ಮಾಡುವುದಿಲ್ಲ. ಇದನ್ನು ಜನರನ್ನು ಮತ್ತು ಸ್ಮಾರ್ಟ್‌ಫೋನ್‌ಗಳನ್ನು ಮುಖ್ಯವಾಗಿ ಗಮನದಲ್ಲಿಟ್ಟುಕೊಂಡು ಅಭಿವೃದ್ಧಿಪಡಿಸಲಾಗಿದೆ.

> ‘ಇಂದಿನ ಜೀವನಕ್ಕೆ ಟೆಲಿಕಾಂ ಸೇವೆ ಅತ್ಯಗತ್ಯ. ಮನೆಯಿಂದ ಕೆಲಸ ಮಾಡಲು, ಮನೆಯಿಂದಲೇ ಓದಲು, ಮನರಂಜನೆ ಪಡೆಯಲು, ಶಾಪಿಂಗ್‌ಗೆ 5ಜಿ ಮೂಲಕ ನೆರವಾಗಲು ಸಿದ್ಧ.
>
> **–ಗೋಪಾಲ್ ವಿಠಲ್,**
> **ಸಿಇಒ, ಏರ್‌ಟೆಲ್**



### ಏರ್‌ಟೆಲ್‌ಗೆ ಜಿಯೊ ಪ್ರತಿಸ್ಪರ್ಧಿ

ದೀಪಾವಳಿಗೆಲ್ಲ ಜನರ ಸ್ಮಾರ್ಟ್‌ಫೋನ್‌ನಲ್ಲಿ ಕಾಣಿಸಿಕೊಳ್ಳುವ ಪ್ಲಾನ್‌ನಲ್ಲಿರುವ ಏರ್‌ಟೆಲ್ 5ಜಿಗೆ ಪ್ರಬಲ ಪ್ರತಿಸ್ಪರ್ಧೆಗೆ ಜಿಯೊ ಸಹ ಸಜ್ಜಾಗಿದ್ದು, ಇದೂ ಸಹ ದೀಪಾವಳಿ ವೇಳೆಗೆ ದೆಹಲಿ, ಮುಂಬೈ, ಚೆನ್ನೈ ಹಾಗೂ ಕೋಲ್ಕತ್ತದಲ್ಲಿ ಸೇವೆಯನ್ನು ಆರಂಭಿಸುವ ಯೋಜನೆಯನ್ನು ಹಾಕಿಕೊಂಡಿದೆ. ಜಿಯೊ ಮಾಡಿರುವ ಪ್ರಮುಖ ನಗರಗಳ ಪಟ್ಟಿಯಲ್ಲಿ ಬೆಂಗಳೂರು ಇಲ್ಲದಿರುವುದು ಅಚ್ಚರಿಯ ವಿಚಾರವಾದರೂ ಬದಲಾದ ಸಂದರ್ಭದಲ್ಲಿ ಉದ್ಯಾನನಗರಿಯಲ್ಲೂ ಸೇವೆ ಸಿಗಲೂಬಹುದು.

ಚೀನಾ ಹಾಗೂ ಅಮೆರಿಕದಂತೆ ಭಾರತವನ್ನೂ ಅಂತರ್ಜಾಲ ಆಧಾರಿತ ಆರ್ಥಿಕತೆ ವ್ಯವಸ್ಥೆಯನ್ನಾಗಿಸುವುದಾಗಿ ರಿಲಯನ್ಸ್ ಕಂಪನಿಯ ಮಾಲೀಕ ಮುಖೇಶ್ ಅಂಬಾನಿ ಈಚೆಗೆ ಹೇಳಿದ್ದಾರೆ. ಇದಕ್ಕಾಗಿ ಸುಮಾರು 2 ಲಕ್ಷ ಕೋಟಿ ರೂಪಾಯಿ ಬಂಡವಾಳವನ್ನು ಕಂಪನಿಯು ಹೂಡಿಕೆ ಮಾಡಿದೆ ಎನ್ನಲಾಗಿದೆ. ■